ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ. ಯವರ ನ್ಯಾಯಾಲಯ, ಕುಂದಾಪುರ

ಸಿ.ಸಿ. ನಂಬ್ರ:2784/2021

ಚಾಸಾ:1 ಪ್ರಾಸಾ:1

ದಿನಾಂಕ: 24.04.2025

| | | |
|---|---|---|
| ವಾಗ್ಮೂಲದವರ ಹೆಸರು | : | ಶ್ರೀ ಶರತ್ ಕುಮಾರ್ ಶೆಟ್ಟಿ |
| ತಂದೆಯ ಹೆಸರು | : | ರಾಮಣ್ಣ ಶೆಟ್ಟಿ |
| ವಯಸ್ಸು | : | 39 ವರ್ಷ |
| ಉದ್ಯೋಗ | : | ಮೆಸ್ಕಾಂ ನಲ್ಲಿ ಕೆಲಸ |
| ವಾಸ ಸ್ಥಳ | : | ಕೆದೂರು |

ಸಾಕ್ಷಿಯನ್ನು ಪ್ರಮಾಣೀಕರಿಸಲಾಯಿತು.

**<u>ಮುಖ್ಯ ವಿಚಾರಣೆ: ಮಾನ್ಯ ಸ.ಸ.ಅ.ರವರಿಂದ:</u>**

ಮೃತ ಸೃಜನ್ ಶೆಟ್ಟಿ ನಮ್ಮ ಊರಿನವರು. ಆತ ಅಪಘಾತದಿಂದ ಮೃತಪಟ್ಟಿರುತ್ತಾರೆ.

ದಿ: 14-08-2021 ರಂದು ನಾನು ಕೆದೂರಿನಿಂದ ತೆಕ್ಕಟ್ಟೆ ಕಡೆಗೆ ಬೈಕಿನಲ್ಲಿ ಹೋಗುತ್ತಿದ್ದಾಗ ನನ್ನ ಹಿಂದಿನಿಂದ ಟೆಂಪೋ ಚಾಲಕನಾದ ಆರೋಪಿ ಓವರ್ ಟೇಕ್ ಮಾಡಿ ಮುಂದಕ್ಕೆ ಹೋಗಿ ಹೆಚ್ ಡಿ ಮಲ್ಲಿ ಉಳ್ತೂರುರವರ ಮನೆಯ ಹತ್ತಿರ ತೆಕ್ಕಟ್ಟೆಯಿಂದ ಕೆದೂರಿಗೆ ಬೈಕಿನಲ್ಲಿ ಬರುತ್ತಿದ್ದ ಸೃಜನ್ ರವರಿಗೆ ಎದುರಿನಿಂದ ಬಂದ ಟೆಂಪೋ ಬಲಬದಿಯ ಹಿಂಭಾಗ ಡಿಕ್ಕಿಪಡಿಸಿರುತ್ತದೆ. ಸದ್ರಿ ಟೆಂಪೋ ಚಾಲಕ ಅತಿ ವೇಗವಾಗಿ ಚಲಾಯಿಸುತ್ತಿದ್ದು, ಸದ್ರಿ ಟೆಂಪೋ ರಸ್ತೆಯ ಬಲಬದಿಗೆ ಚಲಾಯಿಸಿಕೊಂಡು ಹೋಗಿರುತ್ತದೆ. ಅದರ ಸಂಖ್ಯೆ ಕೆಎ-20-ಎಎ-9374 ಆಗಿರುತ್ತದೆ. ಸೃಜನ್ ರವರು ರಸ್ತೆಗೆ ಬಿದಿದ್ದು ತಲೆಗೆ ರಕ್ತಗಾಯವಾಗಿದ್ದು ನಾವು ಅಂಬುಲೆನ್ಸ್ ನಲ್ಲಿ ಆತನನ್ನು ಎನ್ ಆರ್ ಆಚಾರ್ಯ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದು ಆಗ ಸ್ಥಳದಲ್ಲಿ ಚಾಸಾ-3 ಮತ್ತು ಇತರರು ಇದ್ದರು. ಅನಂತರ ಆತನನ್ನು ಮಣಿಪಾಲಕ್ಕೆ ಸ್ಥಳಾಂತರಿಸಲಾಯಿತು.

ಅದೇ ದಿನ ಮಧ್ಯಾಹ್ನ 2-15 ಕ್ಕೆ ಆತ ಮೃತಪಟ್ಟಿರುತ್ತಾರೆ. ಟೆಂಪೋ ಚಾಲಕನ ಹೆಸರು ರಾಜೇಶ್ ನಾಯ್ಕ್ ಆಗಿರುತ್ತದೆ. ಆ ಕುರಿತಾಗಿ ನಾನು ಠಾಣೆಯಲ್ಲಿ ದೂರು ನೀಡಿರುತ್ತೇನೆ.

ಅದೇ ದಿನ ಪೊಲೀಸರು ಸಂಜೆ 5-30ರ ಸಮಯಕ್ಕೆ ಘಟನಾ ಸ್ಥಳಕ್ಕೆ ಭೇಟಿ ನೀಡಿದ್ದು ನಾನು ತೋರಿಸಿದ ಸ್ಥಳದಲ್ಲಿ ಚಾಸಾ-2 ಮತ್ತು 3 ರವರು ಹಾಜರು ಇದ್ದು, ಪಂಚನಾಮೆಯನ್ನು ಜರುಗಿಸಿ ನಕ್ಷೆ ತಯಾರಿಸಿ ಪೋಟೋ ತೆಗೆದು ನನ್ನ ಸಹಿ ಪಡೆದಿರುತ್ತಾರೆ.

ಅನಂತರದಲ್ಲಿ ಅದೇ ದಿನ ಠಾಣೆಗೆ ಬಂದು ವಾಹನಗಳ ಪೋಟೋ ತೆಗೆಯುವ ವೇಳೆಗೆ ಪಂಚನಾಮೆ ಜರುಗಿಸಿರುತ್ತಾರೆ. ಆಗ ಕತ್ತಲೆಯಾಗಿರುತ್ತದೆ. 7 ಗಂಟೆಯಾಗಿರಬಹುದು.

ಸಾಕ್ಷಿ ದೂರು, ಸ್ಥಳ ಪಂಚನಾಮೆ, ನಕ್ಷೆ, ಸ್ವತ್ತು ಸ್ವಾಧೀನತಾ ಪಂಚನಾಮೆ, ದ್ವಿ ಚಕ್ರದ 2 ಪೋಟೋಗಳು, ಟೆಂಪೋದ 2 ಪೋಟೋ, ಸ್ಥಳದ 2 ಪೋಟೋಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ನಿಪಿ-1 ರಿಂದ 10 ಎಂದು, ಸಾಕ್ಷಿಯ ಸಹಿಗಳನ್ನು ನಿಪಿ-1(ಎ) ರಿಂದ 4(ಎ) ಎಂದು ಗುರುತಿಸಲಾಯಿತು. ಸಾಕ್ಷಿ ನ್ಯಾಯಾಲಯದ ಮುಂದೆ ಇರುವ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ.

**<u>ಪಾಟೀ ಸವಾಲುಃ ಆರೋಪಿತರ ಪರ ವಕೀಲರಾದ ಶ್ರೀ ಎಂ ಜೆ ಎಸ್ ರವರಿಂದಃ</u>**

ನಮ್ಮ ಮನೆ ಕೆದೂರು ಹಾಡಿ ಮನೆ. ಅದು ನಮ್ಮ ಕುಟುಂಬದ ಮನೆಯಾಗಿರುತ್ತದೆ. ಮೃತ ಸೃಜನ್ ಶೆಟ್ಟಿರವರ ಮನೆ ಕೆದೂರು ಹಾಡಿ ಮನೆಯಾಗಿರುತ್ತದೆ. ನಾವಿಬ್ಬರೂ ಹಾಡಿ ಮನೆ ಕುಟುಂಬದವರು ಎಂದರೆ ಸರಿ. ಅಪಘಾತದ ಸ್ಥಳ ನಾವು ಯಾವಾಗಲೂ ಓಡಾಡುವ ದಾರಿ ಎಂದರೆ ಸರಿ. ಪಶ್ಚಿಮದಿಂದ ಪೂರ್ವಕ್ಕೆ ಹೋಗುವ ಅಪಘಾತದ ಸ್ಥಳದಲ್ಲಿ ತಿರುವು ಇದೆ ಎಂದರೆ ಸರಿ. ಘಟನಾ ಸ್ಥಳದಿಂದ ನಮ್ಮ ಮನೆ ಸುಮಾರು 2 ವರೆ ಕಿ.ಮೀ ದೂರದಲ್ಲಿ ಇದೆ. ಘಟನಾ ಸ್ಥಳದಲ್ಲಿ ನಾನು, ಸೀತಾರಾಮ, ವಿನಯ, ಗಣೇಶ್ ಶೆಟ್ಟಿ ಇದ್ದೇವು. ಚಾಸಾ-3 ಘಟನಾ ಸ್ಥಳದಿಂದ 3 ಕಿ.ಮೀ ಅಂತರದ ವಾಸಿ ಎಂದರೆ ಸರಿ. ವಿನಯ್ ಶೆಟ್ಟಿರವರು ಘಟನಾ ಸ್ಥಳದಿಂದ 2 ಕಿ.ಮೀ ಅಂತರದ ವಾಸಿ ಎಂದರೆ ಸಾಕ್ಷಿ 1 ಕಿ.ಮೀ ಎಂದು ನುಡಿಯುತ್ತಾರೆ.

ನಾನು ಸ್ಥಳದಲ್ಲಿ ಇದ್ದಾಗ ಚಾಸಾ-5 ರವರು ಇರಲಿಲ್ಲ ಅನಂತರ ಬಂದಿರಬಹುದು. ಚಾಸಾ-5 ರವರು ಘಟನಾ ಸ್ಥಳದಿಂದ ಅರ್ಧ ಕಿ.ಮೀ ಅಂತರದ ವಾಸಿ. ಘಟನಾ ಸ್ಥಳದ ಅಕ್ಕಪಕ್ಕ 7-8 ಮನೆಗಳು ಇವೆ ಎಂದರೆ ಸಾಕ್ಷಿ 3-4 ಮನೆಗಳು ಇವೆ ಎಂದು ನುಡಿಯುತ್ತಾರೆ. ಅಕ್ಕಪಕ್ಕದ ಮನೆಯವರು ಸ್ಥಳಕ್ಕೆ ಬಂದ ಬಗ್ಗೆ ನನಗೆ ತಿಳಿದಿಲ್ಲ.

ನಿಪಿ-1ನ್ನು ಠಾಣೆಯಲ್ಲಿ ಬರೆಯಲಾಯಿತು. ನಿಪಿ-1ನ್ನು ಬರೆಯುವ ಸಮಯ ಅಥವಾ ಪೊಲೀಸರಿಗೆ ಮಾಹಿತಿ ನೀಡುವ ವೇಳೆಗೆ ನಾನು ಮತ್ತು ಮೃತ ಸೃಜನ್ ಒಂದೇ ಕುಟುಂಬದವರು ಎಂದು ತಿಳಿಸಿರುವುದಿಲ್ಲ. ನಮ್ಮ ಮನೆ ಮತ್ತು ಮೃತ ಸೃಜನ್ ರವರ ಮನೆ 2 ಕಿ.ಮೀ ದೂರದಲ್ಲಿ ಇದೆ. ಕೆದೂರು ಹಾಡಿ ಮನೆ ಎಂಬ ಕುಟುಂಬದ ಮನೆ ತೆಂಕಬೆಟ್ಟು ಎಂಬ ಪ್ರದೇಶದಲ್ಲಿ ಇದೆ ಎಂದರೆ ಸರಿ. ಮೃತ ಸುಮಾರು 19 ರಿಂದ 20 ರ ವಯಸ್ಸಿನವರಾಗಿರಬಹುದು. ಆತನಿಗೆ ವಾಹನ ಚಾಲನಾ ಪರಾವನಿಗೆ ಇದ್ದ ಬಗ್ಗೆ ನನಗೆ ಮಾಹಿತಿ ಇಲ್ಲ. ಆತ ಚಲಾಯಿಸುತ್ತಿದ್ದ ದ್ವಿ ಚಕ್ರ ವಾಹನ ಯಾರಿಗೆ ಸೇರಿದ್ದು ಎಂದು ನನಗೆ ಈವರೆಗೂ ತಿಳಿದಿಲ್ಲ.

ಅಪಘಾತವಾದ ಎಷ್ಟು ದಿನಗಳ ಮೊದಲಿನಿಂದ ಆತ ದ್ವಿ ಚಕ್ರ ವಾಹನವನ್ನು ಚಲಾಯಿಸುತ್ತಿದ್ದ ಎಂಬ ಬಗ್ಗೆ ತಿಳಿದಿಲ್ಲ. ಅಪಘಾತವಾದ ಸ್ಥಳ ಸದಾ ವಾಹನ ಸಂಧಣಿಯಿಂದ ಕೂಡಿರುತ್ತದೆ ಎಂದರೆ ಸರಿ. ಅಪಘಾತವಾದ ಸಮಯದಲ್ಲಿ ಮೃತ ಸೃಜನ್ ರವರ ದ್ವಿ ಚಕ್ರ ವಾಹನದ ಮುಂದುಗಡೆ ಹೋಗುತ್ತಿದ್ದ ಕಾರು ಯಾವುದು ಎಂದು ನಾನು ನೋಡಿರುವುದಿಲ್ಲ. ತನ್ನ ಮುಂದೆ ಹೋಗುತ್ತಿದ್ದ ಕಾರನ್ನು ಓವರ್ ಟೇಕ್ ಮಾಡಲು ಮೃತ ತನ್ನ ದ್ವಿ ಚಕ್ರ ವಾಹನವನ್ನು ರಸ್ತೆಯ ಬಲಬದಿಗೆ ಚಲಾಯಿಸಿರುತ್ತಾನೆ ಎಂದರೆ ಸಾಕ್ಷಿ ಅಂತಹ ಸಂಭವ ಇರಲಿಲ್ಲ ಎಂದು ನುಡಿಯುತ್ತಾರೆ.

ಅಪಘಾತ ಸ್ಥಳದಲ್ಲಿ ರಸ್ತೆ ಎಷ್ಟು ಅಗಲ ಇತ್ತು ಎಂದು ನನಗೆ ತಿಳಿದಿಲ್ಲ. ಪೊಲೀಸರು ನಿಪಿ-2 ರಲ್ಲಿ ಕಾಣಿಸಿರುವ ರಸ್ತೆಯ ಅಗಲ ಎಷ್ಟು ಇದೆ ಎಂದು ನನಗೆ ಈಗ ನೆನಪಿಲ್ಲ. ಆದರೆ ಅಗಲವನ್ನು ಕಾಣಿಸಿರುತ್ತಾರೆ. ಮಲ್ಲಿರವರ ಮನೆಯಿಂದ ಘಟನಾ ಸ್ಥಳ 100 ಮೀಟರ್ ದೂರದಲ್ಲಿದೆ. ಆರೋಪಿಯ ವಾಹನವನ್ನು ಘಟನಾ ಸ್ಥಳದಲ್ಲಿಯೇ ನೋಡಿರುತ್ತೇನೆ. ಆರೋಪಿಯ ವಾಹನ ನನ್ನ ದ್ವಿ ಚಕ್ರ ವಾಹನದ

ಉತ್ತರ ದಿಕ್ಕಿಗೆ ಇತ್ತು. ನಾನು ಹೋಗುವ ವೇಳೆಗೆ ಆತ ರಸ್ತೆಗೆ ಬಿದ್ದ. ಆತ ಹೆಲ್ಮೆಟ್ ಧರಿಸಿದ್ದಾನಾ ಎಂದು ನಿಖರವಾಗಿ ಹೇಳಲಾಗುವುದಿಲ್ಲ. ಹೆಲ್ಮೆಟ್ ಮೋಟಾರು ಸೈಕಲಿನ ಹ್ಯಾಂಡಲ್ ಬಾರ್ ನಲ್ಲಿ ಇತ್ತು ಎಂದರೆ ಸಾಕ್ಷಿ ಹೆಲ್ಮೆಟ್ ರಸ್ತೆ ಮೇಲೆ ಬಿದ್ದಿತ್ತು ಎಂದು ನುಡಿಯುತ್ತಾರೆ.

ಅಪಘಾತದ ಸ್ಥಳ ಮಲ್ಲಿರವರ ಮನೆಯ ಗೇಟಿನಿಂದ 5 ಅಡಿ ದೂರವಿರಬಹುದು. ಸದ್ರಿ ದಿನ ನಾನು ಠಾಣೆಗೆ ಮಧ್ಯಾಹ್ನ 3 ಗಂಟೆಗೆ ಹೋಗಿರುತ್ತೇನೆ. ಸುಮಾರು 10 ನಿಮಿಷದ ನಂತರ ದೂರನ್ನು ಬರೆದಿರುತ್ತೇನೆ, ಆ ವೇಳೆಗೆ ಪೊಲೀಸರು ನನ್ನೊಂದಿಗೆ ಇದ್ದರು. ಸ್ಥಳಕ್ಕೆ ಪೊಲೀಸರು ಕರೆದುಕೊಂಡು ಹೋಗುವಾಗ ಸಂಜೆ 5-30 ಗಂಟೆಯಾಗಿತ್ತು. ಚಾಸಾ-2 ಮತ್ತು 3 ನಮ್ಮ ಗ್ರಾಮಸ್ಥರು ಹಾಗೂ ಸ್ನೇಹಿತರು. ಚಾಸಾ-4 ನನ್ನ ಸ್ನೇಹಿತ, ಚಾಸಾ-5 ರವರ ಪರಿಚಯವಿಲ್ಲ. ಚಾಸಾ-2 ಮತ್ತು 3 ರವರು ಸಂಜೆ ಠಾಣೆಗೆ ಬಂದಿದ್ದರು. ಸ್ಥಳ ಪಂಚನಾಮೆಗೆ ನನ್ನ ಸಮಕ್ಷಮ ಚಾಸಾ-2 ಮತ್ತು 3 ಸಹಿ ಮಾಡಿರುತ್ತಾರೆ. ಬೇರೆ ಯಾರೂ ಸಹಿ ಮಾಡಿರುವುದಿಲ್ಲ.

ಸದ್ರಿ ದಾಖಲೆಯಲ್ಲಿ ಹೆಚ್ ಡಿ ಮಲ್ಲಿರವರ ಮನೆಯ ಗೇಟಿನಿಂದ 5 ಅಡಿ ದೂರದಲ್ಲಿ ಆಗಿರುವ ಬಗ್ಗೆ ನಮೂದಿಸಿರುವ ಬಗ್ಗೆ ನನಗೆ ತಿಳಿದಿಲ್ಲ. ನಿಪಿ-2ರ ದಾಖಲೆಯಲ್ಲಿ ಏನೆಲ್ಲಾ ಬರೆದಿದ್ದಾರೆ ಎಂದು ಈಗ ನೆನಪಿಲ್ಲ. ಅಪಘಾತ ಸ್ಥಳದಿಂದ 50 ಮೀಟರ್ ಹಿಂದಕ್ಕೆ 4 ರಸ್ತೆ ಕೂಡುವ ರಸ್ತೆ ಇರುತ್ತದೆ. ಅಪಘಾತದ ಸ್ಥಳದಲ್ಲಿ ನಕ್ಷೆ, ಅಪಘಾತದ ವಿವರಣೆ ಕೇಳಿ ಬರವಣಿಗೆ ಮಾಡಿಕೊಂಡಿರುತ್ತಾರೆ. ಒಟ್ಟಾರೆ ಈ ಪ್ರಕರಣಕ್ಕೆ ಸಂಬಂಧಿಸಿದಂತೆ 2 ಸಹಿಗಳನ್ನು ಮಾಡಿದ್ದೇನೆ. ಸ್ಥಳದಲ್ಲಿ ಪಂಚನಾಮೆಗೆ ಸಹಿ ಮಾಡಿರುತ್ತೇನೆ. ಆಗ ಸಂಜೆ 6-30 ಆಗಿತ್ತು. ಮಳೆಗಾಲ ಇದ್ದು ಸ್ವಲ್ಪ ಕತ್ತಲಾಗಿತ್ತು. ಪಂಚನಾಮೆ ಜರುಗಿಸುವಾಗ ಬೆಳಕಿನ ವ್ಯವಸ್ಥೆ ಮಾಡಿಕೊಂಡಿರಲಿಲ್ಲ ಆಗ ಬೆಳಕು ಇತ್ತು. ಬೆಳಕಿನ ಬಗ್ಗೆ ಏನು ನಮೂದು ಮಾಡಿದ್ದರು ಎಂದು ನನಗೆ ತಿಳಿದಿಲ್ಲ.

ನಾನು ಠಾಣೆಯಲ್ಲಿ ಸಹಿ ಮಾಡಿಲ್ಲ. ಚಾಸಾ-2 ಮತ್ತು 3 ರವರು ಅಲ್ಲಿ ಸಹಿ ಮಾಡಿರುವ ಬಗ್ಗೆ ನನಗೆ ತಿಳಿದಿಲ್ಲ. ಪೊಲೀಸರು ಸ್ಥಳೀಯರನ್ನು ನಿಪಿ-2 ನ್ನು ಜರುಗಿಸುವ ವೇಳೆಗೆ ಕರೆಯಿಸಿಲ್ಲ. ಅಕ್ಕಪಕ್ಕದವರು ಅಂಬುಲೆನ್ಸ್ ನ್ನು ಕರೆಯಿಸಿರುತ್ತಾರೆ. ಅನಂತರ ಎನ್ ಆರ್ ಆಚಾರ್ಯ ಆಸ್ಪತ್ರೆಗೆ

ಕರೆದುಕೊಂಡು ಹೋಗಿರುತ್ತಾರೆ. ಸದ್ರಿ ಆಸ್ಪತ್ರೆಯಲ್ಲಿ ಸುಮಾರು ಅರ್ಧ ಗಂಟೆ ಇದ್ದೇವು. ನಾನೇ ಆತನನ್ನು ಕರೆದುಕೊಂಡು ಹೋಗಿರುತ್ತೇನೆ. ಆ ಬಗ್ಗೆ ಆಸ್ಪತ್ರೆಯ ದಾಖಲೆಗಳಲ್ಲಿ ಕಂಡು ಬರುತ್ತದೆ. ಅಕ್ಕಪಕ್ಕದ ನಿವಾಸಿಗಳು ಆತನನ್ನು ಆಸ್ಪತ್ರೆಗೆ ದಾಖಲಿಸಿರುತ್ತಾರೆ ಎಂದರೆ ಸಾಕ್ಷಿಯು ಸ್ಥಳೀಯರೆಲ್ಲರೂ ಬಂದಿರುತ್ತಾರೆ ಎಂದು ನುಡಿಯುತ್ತಾರೆ.

ಮೃತನಿಗೆ ಮೋಟಾರು ಚಲಾಯಿಸಲು ಯಾವುದೇ ಅನುಭವ ಇರಲಿಲ್ಲ ಎಂದರೆ ನನಗೆ ತಿಳಿದಿಲ್ಲ. ಬೇರೆಯವರ ವಾಹನವನ್ನು ಅನಧಿಕೃತವಾಗಿ ಪೇಟೆಗೆ ತೆಗೆದುಕೊಂಡು ಹೋಗಿರುತ್ತಾನೆ ಎಂರೆ ನನಗೆ ತಿಳಿದಿಲ್ಲ. ಆತ ಅನಧಿಕೃತವಾಗಿ ವಾಹನ ಚಲಾಯಿಸುತ್ತಿದ್ದ ಎಂದು ನನಗೆ ತಿಳಿದಿಲ್ಲ. ಸದ್ರಿ ದಿನ ಆತ ಕಾರನ್ನು ಓವರ್ ಟೇಕ್ ಮಾಡಲು ಹೋಗಿ ಆಯಾ ತಪ್ಪಿ ತನ್ನ ವಾಹನದ ನಿಯಂತ್ರಣವನ್ನು ಕಳೆದುಕೊಂಡು ನೆಲಕ್ಕೆ ಬಿದ್ದಿರುತ್ತಾನೆ ಎಂದರೆ ಸರಿಯಲ್ಲ.

ಆ ಬಾಬ್ತು ವಿಮಾ ಪರಿಹಾರವನ್ನು ಪಡೆಯುವ ಉದ್ದೇಶದಿಂದ ಆತನು ನನ್ನ ಸಂಬಂಧಿಯಾದ ಕಾರಣ ನನ್ನ ಮೂಲಕ ಪ್ರಕರಣವನ್ನು ದಾಖಲಿಸಲಾಗಿದೆ ಎಂದರೆ ಸರಿಯಲ್ಲ. ಚಾಸಾ-6 ನಮ್ಮ ಗ್ರಾಮಸ್ಥರು. ಆತ ಮೃತನ ಕುಟುಂಬಸ್ಥರಿಗೆ ಆತ್ಮೀಯರು ಹಾಗೂ ಆತ ಅಲ್ಲಿ ರಾಜಕೀಯ ಮುಖಂಡರು. ಕೋಟಾ ಪೊಲೀಸರಿಗೆ ಬೇಕಾದವರು ಎಂದರೆ ನನಗೆ ತಿಳಿದಿಲ್ಲ.

ಅಪಘಾತವಾಗಿದೆ ಎನ್ನಲಾದ ಸಮಯದಲ್ಲಿ ಆರೋಪಿಯ ವಾಹನ ಸದ್ರಿ ರಸ್ತೆಯಲ್ಲಿ ಬಂದಿಲ್ಲ ಎಂದರೆ ಸರಿಯಲ್ಲ. ಚಾಸಾ-6 ರವರ ಪ್ರಭಾವದಿಂದ ಪೊಲೀಸರ ಮೇಲೆ ಒತ್ತಡ ಹೇರಿ ವಿಮಾ ಪರಿಹಾರ ಪಡೆಯಲು ಪ್ರಕರಣ ದಾಖಲಿಸಿರುತ್ತೇವೆ ಎಂದರೆ ಸರಿಯಲ್ಲ. ವಿಮಾ ಪರಿಹಾರ ಕೋರಿ ಅರ್ಜಿ ಸಲ್ಲಿಸಿದ್ದಾರೆ ಎಂದರೆ ಸರಿ. ಅದರಲ್ಲಿ ನನ್ನ ತನಿಖೆಯಾಗಿರುತ್ತದೆ. ಅಲ್ಲಿ ವಕೀಲರು ಸಾಕ್ಷಿ ಹೇಗೆ ನುಡಿಯಬೇಕು ಎಂದು ಮಾಹಿತಿ ನೀಡಿದ್ದರು ಎಂದರೆ ಸರಿಯಲ್ಲ. ಆದರೆ ನಾನು ಸಾಕ್ಷಿ ನುಡಿದಿರುತ್ತೇನೆ.

ವಿಮಾ ಕಂಪೆನಿಯವರು ಸದ್ರಿ ಅರ್ಜಿಯನ್ನು ವಿರೋಧಿಸುತ್ತಿದ್ದಾರೆ ಎಂದರೆ ನನಗೆ ಮಾಹಿತಿ ಇಲ್ಲ. ಆದರೆ ನಾನು 2-3 ಬಾರಿ ತನಿಖೆಗೆ ಹಾಜರಾಗಿರುತ್ತೇನೆ. ನಿಪಿ-1ನ್ನು ಪೊಲೀಸರ ನಿರ್ದೇಶನದಂತೆ ತಯಾರಾಗಿದೆ ಎಂದರೆ ಸರಿಯಲ್ಲ. ನಿಪಿ-2 ಕ್ಕೆ ಠಾಣೆಯಲ್ಲಿ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ.

ಅದು ಸ್ಥಳದ ಸ್ಥಿತಿಗತಿಗೆ ಅನುಗುಣವಾಗಿಲ್ಲ ಎಂದರೆ ಸರಿಯಲ್ಲ. ಇದು ಸುಳ್ಳು ಪ್ರಕರಣವಾದ ಕಾರಣ ನನಗೆ ಈ ಪ್ರಕರಣದ ಬಗ್ಗೆ ಸಂಪೂರ್ಣ ಮಾಹಿತಿ ಇಲ್ಲ ಎಂದರೆ ಸರಿಯಲ್ಲ. ನನ್ನ ಸಮಕ್ಷಮ ಯಾವುದೇ ದಾಖಲಾತಿಗಳು ತಯಾರಾಗಿ ಪೋಟೋಗಳನ್ನು ತೆಗೆದಿಲ್ಲ ಎಂದರೆ ಸರಿಯಲ್ಲ. ಘಟನೆ ಸಂಭವಿಸಿದ ಸಮಯದಲ್ಲಿ ನಾನು  ಸ್ಥಳದಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ. ನಾನು ಗಾಯಾಳುವನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಿಲ್ಲ ಎಂದರೆ ಸರಿಯಲ್ಲ.

ಆತ ನಮ್ಮ ಕುಟುಂಬಸ್ಥರಾದ ಕಾರಣ ಆತನ ಪೋಷಕರಿಗೆ ವಿಮಾ ಪರಿಹಾರ ಸಿಗಲಿ ಎಂಬ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದ ಎಲ್ಲಾ ವಿಚಾರಗಳು ಸುಳ್ಳು ಎಂದರೆ ಸರಿಯಲ್ಲ.

**ಮರು ವಿಚಾರಣೆಃ** ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓದಿ ಹೇಳಿ ಕೇಳಿ ಸರಿ ಇದೆ

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರ. ದ. ನ್ಯಾ . ದಂ. ಕುಂದಾಪುರ**